I/247967/2022

# ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/64/ಸಿಡಿಸಿ(2)/2022

ಆಯುಕ್ತರವರ ಕಛೇರಿ
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ
ಬೆಂಗಳೂರು-01
ದಿನಾಂಕ:21/04/2022

## -: ಸುತ್ತೋಲೆ :-

| | |
|---|---|
| **ವಿಷಯ:-** | ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದವರು ಅಲ್ಪಾವಧಿ ತರಬೇತಿ ಪಡೆಯುವ ಬಗ್ಗೆ. |
| **ಉಲ್ಲೇಖ** | 1.AICTE ಅಧಿಸೂಚನೆ, ದಿನಾಂಕ :01-03-2019<br>2. ED 12 DTE 2019, ದಿನಾಂಕ:22-04-2020 ಮತ್ತು 24-03-2020<br>3 .ಸಮಿತಿ ವರದಿ, ದಿನಾಂಕ:11-10-2021 |

*********

ಮೇಲ್ಕಂಡ ವಿಷಯಕ್ಕೆ ಸಂಬಂಧ ಪಟ್ಟಂತೆ ಎಐಸಿಟಿಇ 7 ನೇ ವೇತನ ಗೆಜೆಟ್ ಅಧಿಸೂಚನೆ ಪತ್ರದನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದವರು ಪದೋನ್ನತಿಗಾಗಿ ಅಲ್ಪಾವಧಿ

ತರಬೇತಿಗಳನ್ನು ಕಾಲ ಕಾಲಕ್ಕೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದಕಾರಣ, ಉಲ್ಲೇಖಿತ ಪತ್ರಗಳನ್ವಯ, ಬೋಧಕ ವರ್ಗದವರು ಅಲ್ಪಾವಧಿ ತರಬೇತಿಗೆ ಸಂಬಂಧಿಸಿದಂತೆ ಈ ಕೆಳಕಂಡ ನಿಯಮ/ಅಂಶಗಳನ್ನು ಅನುಸರಿಸುವಂತೆ ಸೂಚಿಸಲಾಗಿದೆ.

1. ಹೊಸದಾಗಿ ಇಲಾಖೆಗೆ ಸೇರ್ಪಡೆಗೊಂಡ ಬೋಧಕ ಸಿಬ್ಬಂದಿ ವರ್ಗದವರು ತರಬೇತಿ ಪಡೆಯಲು www.nittt.ac.in ವೆಬ್ ಸೈಟ್ ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವುದು ಮತ್ತು AICTE ಪ್ರಕಟಿತ Comprehensive Training Policy for Technical Teachers -November 2018 ಕೈಪಿಡಿ ಯಲ್ಲಿ ತಿಳಿಸಿದ ನಿಯಮಗಳನ್ನು ಅನುಸರಿಸುವುದು.
2. AICTE 7 ನೇ ಗೆಜೆಟ್ ಅಧಿಸೂಚನೆ ದಿನಾಂಕ:01-03-2019 ಅನ್ವಯ ಬೋಧಕ ವರ್ಗದವರ ಅಲ್ಪಾವಧಿ ತರಬೇತಿ ಕಾರ್ಯಕ್ರಮಕ್ಕೆ AICTE /UGC / TEQIP / NITTTR / PMMMNMTT / IISc / IIT / University / Govt ಗುರುತಿಸಿದ ಅಲ್ಪಾವಧಿ ತರಬೇತಿ ಕಾರ್ಯಕ್ರಮ (FDP)ಗಳನ್ನು ಪರಿಗಣಿಸುವುದು.
3. NPTEL-AICTE ಪ್ರಮಾಣೀಕರಿಸಿದ MOOC ಕೋರ್ಸ್ ಮಾಡಲು ಪ್ರಸ್ತಾವನೆಯನ್ನು ಅನುಮತಿಗಾಗಿ ಇಲಾಖೆಗೆ ಕಳುಹಿಸುವ ಅಗತ್ಯವಿರುವುದಿಲ್ಲ. ಪ್ರಾಂಶುಪಾಲರ ಅನುಮತಿ ಪಡೆದು ತರಬೇತಿ ಪೂರ್ಣಗೊಂಡ ನಂತರ ಪ್ರಮಾಣ ಪತ್ರದ ಪ್ರತಿಯನ್ನು ಪ್ರಾಂಶುಪಾಲರಿಗೆ ಸಲ್ಲಿಸುವುದು.

4. ಪೂರ್ಣ ಕಾಲಿಕ ನೆಲೆಯಲ್ಲಿ ಉನ್ನತ ಶಿಕ್ಷಣಕ್ಕೆ ನಿಯೋಜನೆಗೊಂಡ ಬೋಧಕ ವರ್ಗದವರು ನಿಯೋಜನಾ ಅವಧಿಯಲ್ಲಿ NPTEL-AICTE ಸಂಯೋಜಿತ MOOC ಕೋರ್ಸ್ ತರಬೇತಿಯನ್ನು ಪಡೆಯಬಹುದಾಗಿದೆ.

6. AICTE ಸೂಚಿಸಿದಂತೆ ಪ್ರಾಂಶುಪಾಲರುಗಳು ಬೋಧಕ ಸಿಬ್ಬಂದಿಯವರ ಅವಶ್ಯಕತೆಗನುಗುಣವಾಗಿ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳ ಪ್ರಸ್ತಾವನೆಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಇಲಾಖೆಯ ಅನುಮತಿಗಾಗಿ ಕಳುಹಿಸಿಕೊಡಬೇಕು.

ಅಲ್ಪಾವಧಿ ತರಬೇತಿಯ ಅವಶ್ಯಕತೆ ಇರುವ ಎಲ್ಲಾ ಬೋಧಕ ವರ್ಗದವರು ಮೇಲಿನ ಸೂಚನೆಗಳನ್ನು ಪಾಲಿಸಿ ತರಬೇತಿಯನ್ನು ಕಾಲಕಾಲಕ್ಕೆ ಪಡೆಯಬೇಕೆಂದು ತಿಳಿಸಲಾಗಿದೆ.

**ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.**

**ಜಂಟಿ ನಿರ್ದೇಶಕರು(ಸಿಡಿಸಿ)**

ಇವರಿಗೆ:

1. ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರು ಮತ್ತು ಬೋಧಕ ವರ್ಗದವರಿಗೆ ಮಾಹಿತಿಗಾಗಿ.
2. ಇ-ಆಡಳಿತ ವಿಭಾಗಕ್ಕೆ –ವೆಬ್ ಸೈಟ್ ನಲ್ಲಿ ಪ್ರಚುರ ಪಡಿಸಲು.